2021-22 (5)

ISSN : 2347-5048

S.T.C. Arts and Commerce College
BANHATTI
587 311

ಸಂಪುಟ : ೧೨
ಸಂಚಿಕೆ : ೪೭
ಜನವರಿ -ಮಾರ್ಚ್
೨೦೨೨

# ಅರುಹು ಕುರುಹು

ಸಾಹಿತ್ಯ ಸಂಸ್ಕೃತಿಯ ಶೋಧದಲ್ಲಿ

## ವಿಶೇಷ ಸಂಚಿಕೆ

## ಸಂಶೋಧನ ತರಂಗ

ಯುಜಿಸಿ- ಕೇರ್ ಪಟ್ಟಿಯಲ್ಲಿರುವ ಮತ್ತು ತಜ್ಞ- ಪರಿಶೀಲಿತ ಕನ್ನಡ ಪತ್ರಿಕೆ

UGC- CARE LISTED AND PEER- REVIEWED KANNADA JOURNAL



೮೪. ಡಿಜಿಟಲ್ ಯುಗದಲ್ಲಿ ಮಾಹಿತಿ ಹುಡುಕಾಟದ ವ್ಯಾಪ್ತಿ ಕೃಷ್ಣ / ೪೦೭
೮೫. ಕೋವಿಡ್–೧೯ ರ ಲಾಕ್‌ಡೌನ್ ಅವಧಿಯಲ್ಲಿ ಹೆಚ್ಚಿದ ಓದಿನ ಹವ್ಯಾಸ
ಡಾ. ಮಂಜುನಾಥ ಜಿ ಲಮಾಣಿ / ೪೧೨
೮೬. ಕೋವಿಡ್–೧೯ ಸಾಂಕ್ರಾಮಿಕ ರೋಗದ ಇಂದಿನ ವಿಷಮ ಪರಿಸ್ಥಿತಿಯಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿರುವ ಕೆಲವು ಆ್ಯಪ್‌ಗಳು
ವಾಯ್. ಬಿ. ಕೊರಡೂರ / ೪೧೬
೮೭. ಹದಿಹರೆಯ ವಯಸ್ಸಿನವರಲ್ಲಿ ಮೊಬೈಲ್ ವ್ಯಸನತೆ: ಸಮಾಜ ಕಾರ್ಯ ದೃಷ್ಟಿಯಲ್ಲಿ ಅವಲೋಕನ
* ಡಾ. ನವೀನಕುಮಾರ ಜಿ. ತಿಪ್ಪಾ, ** ಡಾ. ರವೀಂದ್ರ ಎಮ್.
*** ಪ್ರೊ. ಸಂಗೀತಾ ಆರ್. ಮಾನೆ / ೪೨೨
೮೮. ಅಸ್ತಮಾ ಕಾಯಿಲೆ ನಿಯಂತ್ರಿಸುವಲ್ಲಿ ಹಠಯೋಗ ಪ್ರದೀಪಿಕಾ ಆಸನ ಚಿಕಿತ್ಸಾ ಪದ್ಧತಿ ಮತ್ತು ಪ್ರಯೋಜನಗಳು
* ಡಾ. ತಿಮ್ಮಪ್ಪ ನರಸಪ್ಪ ವಡ್ಡೆಪಲ್ಲಿ, ** ಡಾ. ಕೆ. ಕೃಷ್ಣ ಶರ್ಮ / ೪೨೮
೮೯. ತ್ಯಾಜ್ಯ ನಿರ್ವಹಣೆಯಲ್ಲಿ ಜನರ ಪಾಲ್ಗೊಳ್ಳುವಿಕೆ
ಡಾ. ಪುರುಷೋತ್ತಮ. ಕೆ. ವಿ. / ೪೩೩
೯೦. ಸಾಂಪ್ರದಾಯಿಕ ಕುಲಕಸಬುಗಳ ಮೇಲೆ ಆಧುನೀಕರಣದ ಪ್ರಭಾವ
ಡಾ ಜಿ.ಎಸ್. ಸಕ್ರೇನಾಯ್ಕ / ೪೩೮
೯೧. ಕೊರಗರ ನ್ಯಾಯ ಪದ್ಧತಿಯ ಪ್ರಸ್ತುತತೆ
ಕೆ. ಆರ್. ರಾಜಕುಮಾರ್ / ೪೪೪
೯೨. ಕೋವಿಡ್‌ನಿಂದಾದ ಮಾನವ ಹಕ್ಕುಗಳ ಮೇಲಿನ ಪರಿಣಾಮಗಳು : ಒಂದು ಅವಲೋಕನ
ಧನಲಕ್ಷ್ಮಿ ಕೆ. ಎಚ್. / ೪೫೦
೯೩. ಸಮುದಾಯದಲ್ಲಿ ಆಶಾ ಕಾರ್ಯಕರ್ತೆಯರ ಪಾತ್ರಗಳು ಮತ್ತು ಜವಾಬ್ದಾರಿಗಳು
* ಡಾ. ನವೀನಕುಮಾರ ಜಿ. ತಿಪ್ಪಾ, ** ಡಾ. ರವೀಂದ್ರ ಎಮ್.
*** ಪ್ರೊ. ಸಂಗೀತಾ ಆರ್. ಮಾನೆ / ೪೫೩
೯೪. ಜಾನಕಮ್ಮನವರ ಕಾವ್ಯ ಮತ್ತು ಕೌಟುಂಬಿಕ ನೆಲೆಗಳು
ಡಾ.ಆರ್.ಮಹೇಶ್ / ೪೫೭
೯೫. ಆಸಾದಿ ಕುಲಕಥನಗಳಲ್ಲಿ ತಳಾದಿ ಸಮುದಾಯಗಳ ಅಸ್ಮಿತೆ ಮತ್ತು ಅಭಿವ್ಯಕ್ತಿ
ಶಾಂತಕುಮಾರಿ. ಕೆ / ೪೬೨
೯೬. ಚಿಂತನಾಮೃತ ಮಾಲೆ
ರೇಣುಕಾದೇವಿ ಬಸವರಾಜು / ೪೬೮
೯೭. ದಲಿತ ಚಳವಳಿ ಮತ್ತು ಹೊಸ ಕಾವ್ಯದ ಪ್ರತಿಧ್ವನಿ: ಡಾ. ಸಿದ್ಧಲಿಂಗಯ್ಯ
ನಂದಪ್ಪ. ಪಿ / ೪೭೨
೯೮. ಕುಂದಗನ್ನಡ ಜನಪದ ಕಥೆಗಳಲ್ಲಿ ಸ್ತ್ರೀ ಅಭಿವ್ಯಕ್ತಿ
ಡಾ. ಚಂದ್ರಾವತಿ ಶೆಟ್ಟಿ / ೪೭೫
೯೯. ಶೈಕ್ಷಣಿಕ ಗ್ರಂಥಾಲಯಗಳ ಉದ್ದೇಶ ಮತ್ತು ಮಹತ್ವ: ಒಂದು ವಿಶ್ಲೇಷಣೆ
ಶಶಿಕಾಂತ ಕ. ಬಾಗೇವಾಡಿ / ೪೮೧
೧೦೦. ಬೇಂದ್ರೆ ಕಾವ್ಯದಲ್ಲಿ ಸಾಮಾಜಿಕ ಪ್ರಜ್ಞೆ ಮತ್ತು ದೇಸಿಯತೆ
ಡಾ.ಸುರೇಶಗೌಡ.ಪಿ.ಗೌಡರ / ೪೮೫

S.T.C. Arts and Commerce College BANHATTI 587 311



# ಸಂಪಾದಕೀಯ

ಒಬ್ಬನುಣುವೂಟದಲಿ ಸವಿಯಿಲ್ಲ ಸೊಗವಿಲ್ಲ ।
ಇಬ್ಬರಾಗುವೆನೆಂದನಂತೆ ಪರಬೊಮ್ಮಂ ॥
ಹೆಬ್ಬದುಕನೊಂಟಿತನದೊಳದೇನು ಬದುಕುವೆಯೋ ?।
ತಬ್ಬಿಕೊಳೊ ವಿಶ್ವವನು – ಮಂಕುತಿಮ್ಮ ॥

ಡಿವಿಜಿ ಅವರ ಈ ಸಾಲುಗಳು ಮತ್ತೆ ಮತ್ತೆ ನೆನಪಾಗಲು ಕಾರಣ ಡಿವಿಜಿ ಅವರೂ ಸೇರಿದಂತೆ ಅನೇಕರು ಕನ್ನಡ ಸಾಂಸ್ಕೃತಿಕ ಲೋಕದಲ್ಲಿ ಹೆಬ್ಬದುಕ ಬದುಕಿ; ಬದುಕಿನ ಕುರುಹುಗಳನ್ನುಳಿಸಿ ಹೋಗಿದ್ದಾರೆ. ಆ ಕುರುಹುಗಳೇ ನಮ್ಮ ಸಂಸ್ಕೃತಿಯ ಕೈದೀವಿಗೆಗಳಾಗಿ ಬೆಳಗುತ್ತಿವೆ. ಆ ಬೆಳಕೇ ನಮ್ಮ ಬದುಕಿಗೆ ತೋರುಮರಗಳಾಗಿ ಮಾರ್ಗಸೂಚಿಗಳಾಗಿವೆ. ಓದಿದ್ದು ಕಾನೂನು, ಮಾಡಿದ್ದು ವಕೀಲ ವೃತ್ತಿ, ಆದರೆ ಹಳ್ಳಿ ಹಳ್ಳಿಗೆ ಸೈಕಲ್ ತುಳಿದು, ಮನೆ–ಮನೆ ತಿರುಗಿ, ವಚನಗಳ ಓಲೆಗರಿ, ತಾಳೆಗರಿ, ಕೈ ಬರೆಹಗಳ ಸಾವಿರ ಕಟ್ಟುಗಳನ್ನು ಸಂಗ್ರಹಿಸಿದರು ಈ ಮಹಾತ್ಮ; ಸಾವಿರಾರು ಕಟ್ಟುಗಳ ಸಂಗ್ರಹಣೆಗಾಗಿ ಸಾಲ ಮಾಡಿದ್ದು ಬ್ಯಾಂಕಿನಲ್ಲಿ, ಬ್ಯಾಂಕಿನವರಿಗೆ ಸಾಲ ಹಿಂತಿರುಗಿಸಲಾಗದೆ, ಮನೆ ಜಪ್ತಿಗೆ ಬ್ಯಾಂಕಿನವರು ಬಂದಾಗ ದಿಕ್ಕು ತೋಚದೆ ಕಕ್ಕಾಬಿಕ್ಕಿಯಾದವರು. ಯಾವ ಬಯಕೆ ಇವರನ್ನು ಈ ಕೆಲಸಕ್ಕೆ ನೂಕಿತ್ತು, ಯಾವ ಮೋಹ ಇವರನ್ನು ಆವರಿಸಿತ್ತು? ಯಾರು ಇವರನ್ನು ಹೀಗೆ ಮಾಡೆಂದವರು?

ತಾವು ಸಂಗ್ರಹಿಸಿದ ಸಾಹಿತ್ಯ ಸಂಪತ್ತನ್ನು ಲೋಕಕ್ಕೆ ಕಾಣ್ಕೆಯಾಗಿಸಲು ಪ್ರಕಟಿಸಬೇಕಲ್ಲ! ಹಣವಿಲ್ಲ, ತಾನೇ ಒಂದು ಮುದ್ರಣಾಲಯ ತೆರೆಯಬೇಕೆಂಬ ಹೆಬ್ಬಯಕೆ. ಅದಕ್ಕಾಗಿ ತಾವಿದ್ದ ಮನೆಯನ್ನೇ ಮಾರಿ "ಹಿತಚಿಂತಕ ಮುದ್ರಣಾಲಯ" (೧೯೨೫) ತೆರೆದರು. ಕವಿ ಚರಿತೆಕಾರರು ಆವರೆಗೆ ಸಂಗ್ರಹಿಸಿದ್ದು– ೫೦ ವಚನಕಾರರ ವಚನಗಳನ್ನು ಮಾತ್ರ. ಇವರು ಸಂಗ್ರಹಿಸಿ ಪ್ರಕಟಿಸಿದ್ದು– ೨೫೦ ವಚನಕಾರರ ವಚನಗಳನ್ನು. ಸಂಗ್ರಹಿಸಿದ ಎಲ್ಲಾ ವಚನಗಳನ್ನು ಅಧ್ಯಯನ ಮಾಡಿ, ವರ್ಗೀಕರಿಸಿ, ಯಾವ ಯಾವ ವಚನಕಾರರು ಅವುಗಳನ್ನು ರಚಿಸಿದ್ದಾರೆ. ಅವರ ಅಂಕಿತನಾಮವೇನು? ಮುಂತಾದ ಅಂಶಗಳನ್ನು ಗಮನವಿಟ್ಟುಕೊಂಡು ಪರಿಶೀಲಿಸಿ, ಪರಿಷ್ಕರಿಸಿ, ತಿದ್ದಿ, ತೀಡಿ, ಮುದ್ರಣಕ್ಕೆ ಅಣಿಗೊಳಿಸಿ, ತಮ್ಮದೇ ಮುದ್ರಣಾಲಯದಲ್ಲಿ ಮುದ್ರಿಸಿ ಬೆಳಕಿಗೆ ತಂದವರಿವರು. ಕರ್ನಾಟಕದ ಇತಿಹಾಸದಲ್ಲಿ ಇವರ ಮುದ್ರಣಾಲಯ ಸಂಶೋಧನಾ ಸಾಹಿತ್ಯವನ್ನು ಪ್ರಕಟಿಸಲಿರುವ ಏಕೈಕ ಮುದ್ರಣಾಲಯ 'ಹಿತಚಿಂತಕ ಮುದ್ರಣಾಲಯ' ಎಂದು ಹೆಸರಾಯಿತು.

ಉನ್ನತ ವ್ಯಾಸಂಗಕ್ಕಾಗಿ ಮುಂಬಯಿಯ ಸೇಂಟ್ ಝೇವಿಯರ್ ಕಾಲೇಜಿಗೆ ಸೇರಿದ ಈ ವ್ಯಕ್ತಿ, ಅಲ್ಲಿನ ಮರಾಠಿಗರ, ಗುಜರಾತಿಗರ ಭಾಷಾ ಪ್ರೇಮವನ್ನು ಕಂಡು ತಾವು ಬೆಳೆಸಿಕೊಂಡಿದ್ದು ಕನ್ನಡಾಭಿಮಾನವನ್ನು, ಕನ್ನಡಕ್ಕಾಗಿ ಕೈ ಎತ್ತಿದರು. ಅಲ್ಲಿ ಅವರಿಗೆ

Apps: usefull for the students in covid-19 situation

# ಕೋವಿಡ್-19 ಸಾಂಕ್ರಾಮಿಕ ರೋಗದ ಇಂದಿನ ವಿಷಮ ಪರಿಸ್ಥಿತಿಯಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿರುವ ಕೆಲವು ಆ್ಯಪ್‌ಗಳು

ವಾಯ್. ಬಿ. ಕೊರಡೂರ

ಪ್ರಸ್ತುತ ಇಡಿ ಪ್ರಪಂಚವು ಕೋವಿಡ್-೧೯ ಸಾಂಕ್ರಾಮಿಕ ರೋಗದಿಂದ ಲಾಕ್‌ಡೌನ್ ಮಾಡುವ ಮೂಲಕ ಈ ಪರಿಸರದ ಸುಸ್ಥಿತಿಯನ್ನು ಕಾಯ್ದುಕೊಳ್ಳಲು ಬಹಳಷ್ಟು ಪ್ರಯತ್ನದಲ್ಲಿ ಸಾಗುತ್ತಿದ್ದರು. ಈ ಕೊರೊನಾ ವೈರಸ್ ನಮ್ಮ ಜೀವನವನ್ನು ಮತ್ತು ಜೀವನೋಪಾಯದ ಬಹುತೇಕ ಕ್ಷೇತ್ರಗಳಿಗೆ ಬೆದರಿಕೆ ಹಾಕಿ ನಮಗೆಲ್ಲ ಕೆಟ್ಟ ಪರಿಣಾಮ ಬೀರಿದೆ. ಪ್ರತಿಯೊಂದು ಶೈಕ್ಷಣಿಕ ಕ್ಷೇತ್ರಗಳು ಕೊರೊನಾ ವೈರಸ್‌ನಿಂದ ಹೊರತಾಗಿಲ್ಲ. ಇವುಗಳು ಸಹ ಬಹಳಷ್ಟು ವೈರಸ್ಸಿನ ಪ್ರಭಾವಕ್ಕೊಳಗಾಗಿವೆ. ಇದರಿಂದ ಹೊರ ಬರಲು ಈ ಪರಿಸ್ಥಿತಿಯನ್ನು ನಿಭಾಯಿಸಲು ಜಗತ್ತಿನಾದ್ಯಂತ ಎಲ್ಲಾ ಶೈಕ್ಷಣಿಕ ಕೇಂದ್ರಗಳು ಬಹಳಷ್ಟು ಶ್ರಮವಹಿಸುತ್ತಿವೆ. ಲಾಕ್‌ಡೌನ್ ಎನ್ನುವುದು ಇಂದು ಸರ್ವಸಾಮಾನ್ಯವಾಗಿದೆ. ನಾವು ಸಾಮಾನ್ಯ ಸ್ಥಿತಿಗೆ ಬರಬೇಕೆಂದರೆ ಲಾಕ್‌ಡೌನ್ ಅವಶ್ಯವಾಗಿರುವುದರಿಂದ ಈ ಪರಿಸ್ಥಿತಿಯನ್ನು ಕಟ್ಟುನಿಟ್ಟಾಗಿ ಪಾಲಿಸಲೇಬೇಕಾಗಿದೆ. ಇದೆಲ್ಲವನ್ನು ಎದುರಿಸಿ ಸುಸ್ಥಿತಿಗೆ ಬಂದು ತಮ್ಮ ಚಟುವಟಿಕೆಗಳನ್ನು ಪುನರಾರಂಭಿಸಲು ಸಜ್ಜಾಗುತ್ತಿವೆ. ಈ ಒಂದು ಸಂದಿಗ್ಧ ಪರಿಸ್ಥಿತಿಯನ್ನು ಒಂದು ವಿಷಯವಾಗಿ ಇಟ್ಟುಕೊಂಡು ಸಂಶೋಧನೆ ನಡೆಸಲು ಮತ್ತು ಅಭಿವೃದ್ಧಿ ಸಾಧಿಸಲು ಸಂಬಂಧಿಸಿದ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಅನೇಕ ಶೈಕ್ಷಣಿಕ ಕೇಂದ್ರಗಳಲ್ಲಿ ಕಾಲೇಜುಗಳಲ್ಲಿ ಕಾರ್ಯಗಳು ಚುರುಕುಗೊಂಡಿವೆ. ಇಂಥಾ ಜ್ಞಾನದ ಹೆಬ್ಬಾಗಿಲಾಗಿರುವ ಶೈಕ್ಷಣಿಕ ಕೇಂದ್ರಗಳು ರೋಗವನ್ನು ತಡೆಗಟ್ಟಲು ಅವಶ್ಯವಿರುವ ವೈಜ್ಞಾನಿಕ ಸಂಶೋಧನೆಗಳನ್ನು ಪ್ರಾರಂಭಿಸಲು ಅವಶ್ಯವಿರುವ ಮಾಹಿತಿಯನ್ನು ಸಂಶೋಧಕರಿಗೆ ಮಾಹಿತಿ ಒದಗಿಸುವ ಮೂಲಕ ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯಲು ಪ್ರಾರಂಭಿಸಿದವು. ಈ ಜಗತ್ತಿನ ಉಳಿವಿಗಾಗಿ ಹಾಗೂ ಈ ಸಾಂಕ್ರಾಮಿಕ ರೋಗದ ಸಾಮಾನ್ಯ ನಿಯಮಗಳಾದ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು, ಮುಖಗೌಸು ಧರಿಸುವುದು (ಮಾಸ್ಕ), ಕೈಗವಸು ಧರಿಸುವುದು ಮತ್ತು ಕೈಗಳನ್ನು ಸರಿಯಾಗಿ ತೊಳೆದುಕೊಳ್ಳುವುದು ಕೊರೊನಾ ಲಸಿಕಾ ಕಾರ್ಯ ಪೂರ್ಣಪ್ರಮಾದಲ್ಲಿ ಮುಗಿಯುವವರೆಗೆ ಜಗತ್ತು ಸುಸ್ಥಿತಿಗೆ ಬರುವವರೆಗೆ ಈ ಎಲ್ಲಾ ನಿರ್ಬಂಧಗಳನ್ನು ತೆಗೆದು ಹಾಕುವಂತಿಲ್ಲಾ.

ಲಾಕ್‌ಡೌನ್‌ನಂತಹ ವಿಷಮ ಪರಿಸ್ಥಿತಿಯಲ್ಲಿ ತಮ್ಮ ಕಾರ್ಯಗಳನ್ನು ಸ್ಥಗಿತಗೊಳಿಸಿದ ಹಾಗೂ ಲಾಕ್‌ಡೌನ್ ಅನಂತರದ ದಿನಗಳಲ್ಲಿ ಶೈಕ್ಷಣಿಕ ಸೇವೆಗಳ ಆರಂಭದಲ್ಲಿ ಗಣನೆಗೆ ತೆಗೆದುಕೊಳ್ಳಬೇಕಾದ ಮಾನದಂಡಗಳ ಬಗ್ಗೆ ಮತ್ತು ಉತ್ತಮ ತಿಳಿವಳಿಕೆಯ ಬಗ್ಗೆ ಈ ಪ್ರಸ್ತುತ ಅಧ್ಯಯನವು ತಿಳಿದುಕೊಳ್ಳಲು ಪ್ರಯತ್ನಿಸುತ್ತಿದೆ. ಕಳೆದ ದಿನಮಾನಗಳಲ್ಲಿ ನಾವು ಕಂಡ ಸಾಂಕ್ರಾಮಿಕ ರೋಗದ ಅನುಭವವು ಭವಿಷ್ಯದಲ್ಲಿ ಈ ಪರಿಸ್ಥಿತಿಯಲ್ಲಿ ಯಾವ ರೀತಿ ತಮ್ಮ ವಿದ್ಯಾರ್ಥಿಗಳಿಗೆ ಸೇವೆಗಳನ್ನು ಒದಗಿಸಬಹುದು ಮತ್ತು ಮರು-ತೆರೆಯುವಿಕೆಯಲ್ಲಿ ಶೈಕ್ಷಣಿಕ ಕೇಂದ್ರಗಳು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಉತ್ತಮ ಅನುಭವವನ್ನು ನೀಡುತ್ತದೆ.

ವಾಯ್. ಬಿ. ಕೊರಡೂರ, ಗ್ರಂಥಪಾಲಕರು
ಎಸ್.ಟಿ.ಸಿ. ಮಹಾವಿದ್ಯಾಲಯ, ಬನಹಟ್ಟಿ, ಬಾಗಲಕೋಟೆ ಜಿಲ್ಲೆ

ಇತ್ತೀಚಿನ ದಿನಗಳಲ್ಲಿ ಎಲ್ಲದಕ್ಕೂ ಆ್ಯಪ್‌ಗಳು ಹುಟ್ಟಿಕೊಂಡಿವೆ. ಇವುಗಳು ಪ್ರತಿಯೊಬ್ಬರ ಜೀವನವನ್ನು ಸುಲಭಗೊಳಿಸುವುದಲ್ಲದೇ ಬಹಳಷ್ಟು ಸರಳೀಕರಣಗೊಳಿಸಿವೆ. ಇವುಗಳಿಂದ ಹೆಚ್ಚು ಆರ್ಥಿಕ ಹೊರೆ ಬೀಳದೆ ಉಚಿತವಾದ ಮತ್ತು ಸುರಕ್ಷಿತವಾದ ಮಾಹಿತಿಯನ್ನು ಇವುಗಳಿಂದ ಪಡೆಯಲು ಬಹಳಷ್ಟು ಉಪಯುಕ್ತವಾಗಿವೆ. ಹೀಗಾಗಿ ಇಂದು ನಾವು ತಂತ್ರಜ್ಞಾನಕ್ಕೆ ಧನ್ಯವಾದವನ್ನು ಹೇಳಲೇಬೇಕು. ಹೆಚ್ಚು ಪ್ರಾಪಂಚಿಕ ಕಾರ್ಯಗಳು ಸುಗಮವಾಗಿ ಸಾಗಲು ಇಂದು ಪ್ರತಿಯೊಬ್ಬ ಮನುಷ್ಯನು ಸ್ಮಾರ್ಟ್‌ಫೋನ್ ಅಥವಾ ಟ್ಯಾಬ್ಲೇಟ್‌ಗಳನ್ನು ಹೊಂದಿರುತ್ತಾರೆ. ಅವುಗಳ ಮುಖಾಂತರ ಅನೇಕ ಆ್ಯಪ್‌ಗಳನ್ನು ಡೌನಲೋಡ್ ಮಾಡಿಕೊಂಡು ಅವರ ದಿನನಿತ್ಯದ ಅನೇಕ ಕಾರ್ಯಗಳನ್ನು ಸುಲಭವಾಗಿ ನಿರ್ವಹಿಸಲು ಅನುಕೂಲವಾಗಿವೆ.

ಹೀಗೆ ಹಲವಾರು ಆ್ಯಪ್‌ಗಳೊಂದಿಗೆ ವಿದ್ಯಾರ್ಥಿಯ ಜೀವನವು ಸುಲಭವಾಗಿದೆ. ಹಿಂದಿನ ಕಾಲಕ್ಕೆ ಹೋಲಿಸಿದರೆ ಇಂದು ಪ್ರತಿಯೊಬ್ಬ ವಿದ್ಯಾರ್ಥಿಯು ಒಂದು ನಿರ್ದಿಷ್ಟ ವಯಸ್ಸಿನ ಅನಂತರ ಸ್ಮಾರ್ಟ್‌ಫೋನ್‌ಗಳನ್ನು ಹೊಂದಿದ್ದಾನೆ. ಮನರಂಜನೆ ಉದ್ದೇಶಕ್ಕಾಗಿ ಮಾತ್ರವಲ್ಲದೆ ಹಲವಾರು ಅಪ್ಲಿಕೇಷನ್‌ಗಳು(ಆ್ಯಪ್) ಮಾಹಿತಿಯೊಳಗೊಂಡ ಶೈಕ್ಷಣಿಕ ಅಧ್ಯಯನದಲ್ಲಿ ಸಹಾಯ ಮಾಡುತ್ತವೆ. ಈಗ ಅನೇಕ ಶೈಕ್ಷಣಿಕ ಆ್ಯಪ್‌ಗಳನ್ನು ಆನ್‌ಲೈನ್‌ನಲ್ಲಿ ಸಿಗುತ್ತಿರುವುದರಿಂದ ಅವುಗಳನ್ನು ಸ್ಮಾರ್ಟ್‌ಫೋನ್‌ಗಳ ಮೂಲಕ ಸ್ಮಾರ್ಟ್ ಆಗಿ ಮಾಹಿತಿ ಪಡೆಯಲು ಬಹಳಷ್ಟು ಅನುಕೂಲವಾಗಿವೆ. ಈ ಕೆಲವು ಅಪ್ಲಿಕೇಷನ್‌ಗ (ಆ್ಯಪ್) ಡೌನಲೋಡ್ ಮಾಡುವುದು ಇಂದಿನ ವಿದ್ಯಾರ್ಥಿಗಳಿಗೆ ದೈವದತ್ತವಾಗಿ ಬಂದ ವರವಾಗಿದೆ. ನಾವು ಈ ಮೊದಲು ಅನೇಕ ಮಾಹಿತಿಯನ್ನು ಪೆನ್‌ಡ್ರೈವ್ ಹಾಗೂ ಹಾರ್ಡ್‌ಡಿಸ್ಕಗಳ ಮುಖಾಂತರ ಸಂಗ್ರಹ ಮಾಡಿ ಇಡುತ್ತಿದ್ದೇವು. ಆದರೆ ಅದು ಅಷ್ಟು ಸುರಕ್ಷಿತವಾದವುಗಳಲ್ಲಾ, ಹೀಗಾಗಿ ಅನೇಕ ವಿದ್ಯಾರ್ಥಿಗಳು ಇಂದು ಡ್ರಾಪ್‌ಬಾಕ್ಸ್ ಇಂದೊಂದು ಬಹಳಷ್ಟು ಸಹಾಯಕವಾದ ಅಪ್ಲಿಕೇಷನ್ ಆಗಿದ್ದು ಇದು ವರ್ಚುವಲ್ ಡ್ರೈವ್ ಆಗಿದ್ದು ಅದು ಸಂಗ್ರಹ ಮಾಡಿದ ಎಲ್ಲಾ ಡೇಟಾವನ್ನು ಉಳಿಸುತ್ತದೆ ಮತ್ತು ಆ ಮಾಹಿತಿಯನ್ನು ಸೇವ್ ಮಾಡಿದವರ ಫೋನ್ ಮತ್ತು ಲ್ಯಾಪ್‌ಟಾಪ್‌ಗೆ ಸಿಂಕ್ ಮಾಡುತ್ತದೆ. ಅದನ್ನು ಎಲ್ಲಿಯಾದರೂ ಪ್ರವೇಶಿಸಿ ಮಾಹಿತಿ ಪಡೆಯಬಹುದು. ಅದು ಕಳೆದುಕೊಳ್ಳುವ ಭಯವಿಲ್ಲಾ ಅಥವಾ ವಿಷಯ ಅಳಿಸಿ ಹಾಕುವುದಿಲ್ಲಾ, ಕಡಿಮೆ ಸಮಯದಲ್ಲಿ ಹೆಚ್ಚಿನ ಮಾಹಿತಿ ಮತ್ತು ನಿಖರವಾದ ಮಾಹಿತಿಯನ್ನು ಒದಗಿಸುತ್ತದೆ. ಹೀಗಾಗಿ ಇದು ಬಳಕೆದಾರರ ಸ್ನೇಹಿಯಾಗಿ ಡ್ರಾಪ್ ಬ್ಯಾಕ್ಸ್ ಕಾರ್ಯನಿರ್ವಹಿಸುತ್ತದೆ. ಇದು ವೇಗವಾಗಿ ಮತ್ತು ಹೆಚ್ಚು ನಿರ್ದಿಷ್ಟ ಫಲಿತಾಂಶಗಳನ್ನು ನೀಡುತ್ತದೆ. ನಮ್ಮ ಅನೇಕ ಪ್ರಶ್ನೆಗಳಿಗೆ ಸರಳವಾದ ಹಾಗೂ ನಿಖರವಾದ ಉತ್ತರ ನೀಡುವುದರಿಂದ ಇಂದು ಇದು ವಿದ್ಯಾರ್ಥಿ ಸ್ನೇಹಿಯಾಗಿ ಕಾರ್ಯನಿರ್ವಹಿಸುತ್ತಿದೆ.

ಕೆಲವೇ ಕೆಲವು ವರ್ಷಗಳ ಹಿಂದೆ ಉಪನ್ಯಾಸಗಳಿಗೆ ಹಾಜರಾಗುವ ವಿದ್ಯಾರ್ಥಿಗಳು ಉಪನ್ಯಾಸವನ್ನು ನೋಟ್‌ಬುಕ್‌ಗಳಲ್ಲಿ ಸ್ವಲ್ಪು ಕಳೆದುಕೊಳ್ಳದಂತೆ ಅವುಗಳನ್ನು ಬರೆದು ಸಂಗ್ರಹ ಮಾಡಿ ಇಟ್ಟುಕೊಳ್ಳಬೇಕಾಗಿತ್ತು. ಇಡಿ ಸಮಯವನ್ನು ಅದಕ್ಕಾಗಿ ವ್ಯಯಿಸಬೇಕಾಗಿತ್ತು ಬರೆದಿಡಬೇಕಾಗಿತ್ತು. ಆದರೆ ಇಂದು ತಂತ್ರಜ್ಞಾನದ ಪ್ರಗತಿಯಿಂದ ಅನೇಕ ಉಪನ್ಯಾಸ ಕ್ಯಾಪ್ಚರ್ ಅಪ್ಲಿಕೇಷನ್‌ಗಳು ಬಂದಿರುವುದರಿಂದ ಸುಲಭವಾಗಿ ಅವುಗಳನ್ನು ಸಂಗ್ರಹಿಸುವುದರಲ್ಲಿದೆ ರೇಕಾರ್ಡಿಂಗ್ ಮಾಡಿದ ಉಪನ್ಯಾಸವನ್ನು ಮರಳಿ ಕೇಳಲು ಅನುಕೂಲವಾಗುತ್ತದೆ ಮತ್ತು ಅವುಗಳನ್ನು ಪ್ರಿಂಟ್ ಸಹ ಪಡೆಯಲುಬಹುದು. ಹೀಗಾಗಿ ವಿದ್ಯಾರ್ಥಿಗಳಿಗೆ ಜನಪ್ರಿಯ ಉಪನ್ಯಾಸವನ್ನು ದೃಶ್ಯ ಮತ್ತು ಧ್ವನಿ (ಆಡಿಯೋ) ರೂಪದಲ್ಲಿ ಸಂಗ್ರಹಿಸಲು ಬಹಳಷ್ಟು ಉಪಯುಕ್ತವಾಗಿವೆ ಮತ್ತು ಅವುಗಳನ್ನು ಅನೇಕ ಪಿ.ಡಿ.ಎಫ್., ಎಂ.ಎಸ್.

S.T.C. Arts and Commerce College BANHATTI 587 311

ವರ್ಡ್ ಅಥವಾ ಪಾವರ್‌ಪಾಯಿಂಟ್ ಫೈಲ್‌ಗೆ ಪರಿವರ್ತಿಸಲು ಪರಿವರ್ತಿಸಿದ ಡೇಟಾ ಸಂಗ್ರಹಿಸಲು ಅನುಕೂಲವಾಗಿವೆ.

ಇದರ ಜೊತೆಗೆ ತಾವು ಆ್ಯಪ್ ಮೂಲಕ ಸಂಗ್ರಹವಾದ ಡೇಟಾಗಳನ್ನು ನೀವು ನಿಮ್ಮ ಸ್ನೇಹಿತರಿಗೆ, ಸಹಪಾಠಿಗಳಿಗೆ ಅಥವಾ ವಿದ್ಯಾರ್ಥಿಗಳೊಂದಿಗೆ ಸಂಪರ್ಕ ಸಾಧಿಸುವ ಮತ್ತು ಸಹಕರಿಸುವ ಸಾಮರ್ಥ್ಯವನ್ನು ಆ್ಯಪ್‌ಗಳು ಹೊಂದಿರುತ್ತವೆ.

ಕಾಲೇಜು ವಿದ್ಯಾರ್ಥಿಗಳು ಕಾಲೇಜು ಜೀವನವನ್ನು ನಡೆಸುವಾಗ ಉತ್ತಮವಾಗಿ ಅಧ್ಯಯನ ಮಾಡಲು ಮತ್ತು ಅನುಕೂಲತೆಯನ್ನು ಹೆಚ್ಚಿಸಲು ಸಹಾಯ ಮಾಡಲು ನಿರ್ಮಿಸಲಾದ ಅನೇಕ ಅಪ್ಲಿಕೇಷನ್‌ಗಳನ್ನು ಅವಲಂಬಿಸಬಹುದು. ಆದಾಗಿಯೂ ಆನ್‌ಲೈನ್ ಪ್ಲೇ ಸ್ಟೋರ್‌ಗಳಾದ ಗೂಗಲ್, ಪ್ಲೇಸ್ಟೋರ್ ಮತ್ತು ಡಿ ಟ್ಯೂನ್ಸ್ ಆಪ್ ಸ್ಟೋರ್‌ಗಳು ಸಾವಿರಾರು ಅಪ್ಲಿಕೇಷನ್‌ಗಳಿಂದ ತುಂಬಿವೆ ಮತ್ತು ಅವುಗಳನ್ನು ಡೌನ್‌ಲೋಡ್ ಮಾಡುವುದರಿಂದ ಮೊಬೈಲ್‌ನಲ್ಲಿ ಶೇಖರಣಾ ಸ್ಥಳಾವಕಾಶವಿಲ್ಲ. ಆದ್ದರಿಂದ ಕಾಲೇಜು ವಿದ್ಯಾರ್ಥಿಗಳು ತಮ್ಮ ಅಭ್ಯಾಸಕ್ಕೆ ಹೆಚ್ಚು ಉಪಯೋಗವಾಗುವ ಕಲಿಕೆಯ ವಿಷಯಕ್ಕೆ ಹೊಂದುವ ಮೌಲ್ಯಯುತ ಬೇಡಿಕೆಯನ್ನು ಪೂರೈಸುವ ಆ್ಯಪ್‌ಗಳನ್ನು ಮಾತ್ರ ಡೌನ್‌ಲೋಡ್ ಮಾಡುವುದು ಮತ್ತು ಅವುಗಳನ್ನು ಸಂಗ್ರಹಿಸಿಡುವುದು ಮುಖ್ಯವಾಗಿದೆ. ಆದರೆ ಯಾವುದನ್ನು ದೀರ್ಘಕಾಲ ಇಟ್ಟುಕೊಳುವುದು ಮತ್ತು ಅವುಗಳ ಸಂಪರ್ಕದಲ್ಲಿರುವುದು ಹಾಗೂ ಅವು ಎಷ್ಟು ಯೋಗ್ಯವಾಗಿವೆ ಎಂಬುವುದನ್ನು ತಿಳಿದುಕೊಳ್ಳುವ ಸಲುವಾಗಿ ಈ ಒಂದು ಅಭ್ಯಾಸದಲ್ಲಿ ಅವುಗಳ ಉಪಯುಕ್ತತೆ ಬಗ್ಗೆ ಕೆಲವು ಉದಾಹರಣೆಗಳ ಮೂಲಕ ಇಲ್ಲಿ ಹೇಳಲಾಗಿದೆ. ಇದರಲ್ಲಿ ತಿಳಿಸಿದ ಅಪ್ಲಿಕೇಷನ್‌ಗಳು ವಿದ್ಯಾರ್ಥಿ ಸ್ನೇಹಿಗಳಾಗಿವೆ. ಇವುಗಳು ವಿದ್ಯಾರ್ಥಿ ಜೀವನದ ಹಲವು ಅಂಶಗಳನ್ನು ಸಶಕ್ತಗೊಳಿಸುತ್ತವೆ ಮತ್ತು ವಿದ್ಯಾರ್ಥಿಗಳಲ್ಲಿ ಸೃಜನಶೀಲತೆಯನ್ನು ಹೆಚ್ಚಿಸಲು ಬಹಳಷ್ಟು ಅನುಕೂಲವಾದ ಕೆಲವು ಈ ಕೆಳಗೆ ಮಾಹಿತಿ ನೀಡಲಾಗಿದೆ.

೧. **MOOC HOUSE MOOC HOUSE** ಒಂದು ಉಚಿತ ವೆಬ್ ಆಧಾರಿತ ದೂರ ಶಿಕ್ಷಣ ಕಾರ್ಯಕ್ರಮವಾಗಿದ್ದು, ಬೇರೆ ಬೇರೆ ಕಡೆಗೆ ವಾಸಿಸುವ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ತಮಗೆ ಅವಶ್ಯವಿರುವ ಅಧ್ಯಯನವನ್ನು ಮಾಡಲು ಅವರು ಇದರಲ್ಲಿ ಭಾಗವಹಿಸುವುದಕ್ಕಾಗಿ ಇದನ್ನು ವಿನ್ಯಾಸಗೊಳಿಸಲಾಗಿದೆ. ಇವುಗಳನ್ನು ಕಾಲೇಜು ಮತ್ತು ವಿಶ್ವವಿದ್ಯಾಲಯ ಪಠ್ಯಕ್ರಮದಂತೆ ಮತ್ತು ಮುಕ್ತವಾಗಿ ಸೇರ ಬಯಸುವವರಿಗೆ ಒಂದೇ ಬಾರಿಗೆ ಎರಡು ಕೋರ್ಸ್‌ಗೆ ಪ್ರವೇಶ ಪಡೆಯಬಹುದು ಅಂತಹ ಕಲಿಕೆಗೆ ಅನುಕೂಲವಾಗುವ ಕೆಲವು ಉದಾಹರಣೆಗಳು.

೨. **ಡ್ರಾಪ್‌ಬಾಕ್ಸ್**: ಇಂದಿನ ವೇಗದ ಜಗತ್ತಿನಲ್ಲಿ ಎಲ್ಲವನ್ನು ಏಕಕಾಲದಲ್ಲಿ ನಿರ್ವಹಿಸಲು ತೊಂದರೆಯಾಗುತ್ತಿರುವ ನೀವು ಅಧ್ಯಯನ ಮಾಡುವ ಹಲವು ಅಂಶಗಳನ್ನು ಸಂಘಟಿಸಲು ಸಹಾಯ ಮಾಡುವ ಸರಿಯಾದ ಸಾಧನಗಳನ್ನು ಹೊಂದಿರುವುದು ಒಳ್ಳೆಯದು. ಇಂದು ಅತ್ಯುತ್ತಮ ಸಾಂಸ್ಥಿಕ ಮತ್ತು ಸಮಯ ನಿರ್ವಹಣಾ ಕೌಶಲ್ಯಗಳನ್ನು ಹೊಂದಿರುವುದು ಸಮರ್ಥ ಕಲಿಕೆಗೆ ಪ್ರಮುಖ ಆದ್ಯತೆಗಳಾಗಿವೆ. ಡ್ರಾಪ್‌ಬಾಕ್ಸ್ ಈ ಅಗತ್ಯಗಳನ್ನು ಪೂರೈಸುತ್ತದೆ ಮತ್ತು ನಿಮ್ಮ ಎಲ್ಲಾ ದಾಖಲೆಗಳು, ಫೋಟೋಗಳು ಮತ್ತು ವಿಡಿಯೋ ವಿಷಯಗಳನ್ನು ಒಂದೇ ಆನ್‌ಲೈನ್ ಸ್ಥಳದಲ್ಲಿ ನಿರ್ವಹಿಸಲು ಸಹಾಯ ಮಾಡುತ್ತದೆ. ವಿದ್ಯಾರ್ಥಿಗಳಾದ ತಾವು ಕನಿಷ್ಠ ೨ಜಿ.ಬಿ. ಉಚಿತ ಸಂಗ್ರಹಣೆಯನ್ನು ಪಡೆಯುತ್ತೀರಿ. ಆದರೆ ಪ್ರತಿಬಾರಿ ನೀವು ಅದನ್ನು ಸ್ನೇಹಿತರಿಗೆ ಶಿಫಾರಸ್ಸು ಮಾಡುವಾಗ ೫೦೦ಎಂ.ಬಿ. ಹೆಚ್ಚಿನದನ್ನು ಸೇರಿಸಬಹುದು. ಕಿಂಡಲ್ ಫೈರ್ ಅನಂತರ ಇತರ ಸಾಧನಗಳಲ್ಲಿ ಇದನ್ನು ಬಳಸಲು ನೀವು ಮುಕ್ತರಾಗಿದ್ದೀರಿ.

೩. **ಕಾಲೇಜು ಪ್ರಬಂಧ ಬರೆವಣಿಗೆ ಸಹಾಯ:** ವಿದ್ಯಾರ್ಥಿಗಳಾದವರಿಗೆ ಪ್ರತಿನಿತ್ಯದ ಕಾರ್ಯಯೋಜನೆ ಬರೆದಿಡಲು ವೇಳೆ ಸಾಕಾಗುವುದಿಲ್ಲಾ ಈ ಅಪ್ಲಿಕೇಷನ್ ನಿಮ್ಮ ದಿನನಿತ್ಯದ ಕಾರ್ಯಯೋಜನೆ ಮತ್ತು ಪ್ರಬಂಧವನ್ನು ಬರೆಯುವಂತಹ ಕಾರ್ಯಗಳಲ್ಲಿ ನಿಮ್ಮನ್ನು ಹಿಂದೆ ಬೀಳಿಸುವುದಿಲ್ಲಾ. ಸ್ವಲ್ಪ ವೇಳೆಯಲ್ಲಿ ನಿಮ್ಮ ಎಲ್ಲಾ ಬರೆವಣಿಗೆಯ ವೇಳೆ ಪಟ್ಟಿಯ ಕಾರ್ಯಯೋಜನೆಗಳನ್ನು ಯಾವುದೇ ಕಷ್ಟವಿಲ್ಲದೆ ಬರೆದು ಸಲ್ಲಿಸಬಹುದು ನಿಮಗೆ ಯಾವುದಾದರೂ ಗಡವು ನೀಡಿ ಚಿಂತೆಯಾಗಿದ್ದರೆ ಅದನ್ನು ಬೇಗನೆ ಪೂರೈಸಬಹುದು ಹೀಗಾಗಿ ಈ ಅಪ್ಲಿಕೇಷನ್ ವಿದ್ಯಾರ್ಥಿಗಳಿಗೆ ಬಹಳಷ್ಟು ಉಪಯುಕ್ತವಾಗಿದೆ.

೪. **Black Board App (ಕಪ್ಪು ಹಲಗೆ ಅಪ್ಲಿಕೇಶನ್)** : ಇದು ಒಂದು ಜನಪ್ರಿಯ ಕಲಿಕಾ ನಿರ್ವಹಣಾ ವ್ಯವಸ್ಥೆ ಬ್ಲಾಕ್ ಬೋರ್ಡನ್ನು ಜಗತ್ತಿನಾದ್ಯಂತ ಅನೇಕ ಕಾಲೇಜುಗಳಲ್ಲಿ ಬಳಸಲಾಗುತ್ತದೆ. ಮೊಬೈಲ್ ಈ ಅಪ್ಲಿಕೇಶನ್ ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿಗಳಿಗೆ ಕೋರ್ಸವರ್ಕ ಅಥವಾ ವರ್ಚವಲ್ ಘಟಕಗಳೊಂದಿಗೆ ತಾವು ವಯಕ್ತಿಕವಾಗಿ ತರಗತಿಗಳಿಗೆ ಸೇರಲು ಬಹಳಷ್ಟು ಅನುಕೂಲವಾಗಿದೆ. ಇದರಲ್ಲಿ ವಿದ್ಯಾರ್ಥಿಗಳು ತಮಗೆ ಸಂಬಂಧಿಸಿದ ಕೋರ್ಸ್ ವಿಷಯ ಹಾಗೂ ಕಾರ್ಯ ಯೋಜನೆಗಳನ್ನು ಮತ್ತು ಪರೀಕ್ಷೆಗಳನ್ನು ಸಹ ಇದರಲ್ಲಿ ವೀಕ್ಷಿಸಬಹುದು ಮತ್ತು ತೆಗೆದುಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಈ ಒಂದು ಕೊವೀಡ್-೧೯ ರ ಸಮಯದಲ್ಲಿ ಬಹಳಷ್ಟು ಉಪಯುಕ್ತವಾಗಿದೆ.

೫. **ಕ್ಯಾನ್ವಾಸ್ ವಿದ್ಯಾರ್ಥಿ (Canvas Student):** ಕ್ಯಾನ್ವಾಸ್ ವಿದ್ಯಾರ್ಥಿ ಬ್ಲಾಕ್ ಬೋರ್ಡನಂತೆಯೇ, ವಿದ್ಯಾರ್ಥಿಗಳು ಕೋರ್ಸವರ್ಕನ್ನು ಪ್ರವೇಶಿಸುವುದು, ಕಾರ್ಯ ಯೋಜನೆಗಳನ್ನು ಸಲ್ಲಿಸಬಹುದು ಮತ್ತು ಈ ಒಂದು App ಅವರುಗಳ ಗ್ರೇಡ್‌ಗಳನ್ನು ವೀಕ್ಷಿಸಬಹುದು ಬ್ಲಾಕ್ ಬೋರ್ಡ ಹಾಗೂ ಕ್ಯಾನ್ವಾಸ್ Appಗಳು ವಿದ್ಯಾರ್ಥಿಗಳ ಉಪಯೋಗ ಮಟ್ಟದ ಮೇಲೆ ಇವುಗಳು ಅವಲಂಬಿತವಾಗಿವೆ.

೬. **ಡ್ಯುಯಾಲಂಗೊ (Duolingo)** ಈ ಒಂದು App ಜಗತ್ತಿನ ೩೫ ಕ್ಕೂ ಅಧಿಕ ಭಾಷೆಗಳಲ್ಲಿ ಪಾಠಗಳನ್ನು ಕಲಿಯಬಹುದು, ಮಾತನಾಡುವುದನ್ನು ಓದುವುದನ್ನು, ಕೇಳುವುದನ್ನು, ಬರೆಯುವುದನ್ನು, ವ್ಯಾಕರಣ ಮತ್ತು ಶಬ್ದಾರ್ಥಗಳನ್ನು ಶಬ್ದಕೋಶವಾಗಿ ಬಳಕೆದಾರರಿಗೆ ಸಹಾಯ ಮಾಡುತ್ತದೆ. ಇದು ಉಚಿತವಾಗಿ ಮತ್ತು ಹಣಕೊಟ್ಟು ಶ್ರೇಷ್ಠ ಆವೃತಿಯನ್ನು ಪಡೆದುಕೊಳ್ಳಬಹುದು. ಇದೊಂದು ಜಗತ್ತಿನ ಹೊಸ ಭಾಷೆ ಕಲಿಯಲು ಶ್ರೇಷ್ಠ ಮಾರ್ಗ ಒದಗಿಸುತ್ತದೆ.

೭. **ಗೂಗಲ್ ಕ್ಯಾಲೆಂಡರ್ (Google Calendar)** ಈ Appನ ವ್ಯಾಪ್ತಿಯನ್ನು ಗಮನಿಸಿದರೆ ಈಗಾಗಲೇ ಸಾಮನ್ಯವಾಗಿ ಬಹಳಷ್ಟು ವಿದ್ಯಾರ್ಥಿಗಳು ಈ ಒಂದು Appನ ಬಳಕೆಯು ಚಿರಪರಿಚಿತವಾಗಿದೆ. ಇದನ್ನು ಕೆಲವು ಈವೆಂಟ್‌ಗಳನ್ನು ನಿಗದಿಪಡಿಸಲು, ಜ್ಞಾಪನೆಗಳನ್ನು ರಚಿಸಲು ಸಾಕಷ್ಟು ಇದನ್ನು ಬಳಸಲಾಗುತ್ತದೆ.

೮. **ವಿದ್ಯಾರ್ಥಿ ಯೋಜಕ ಅಪ್ಲಿಕೇಷನ್‌ಗಳು (Students Planner Apps):** ಇದೊಂದು ವಿದ್ಯಾರ್ಥಿಗಳಿಗಾಗಿ ಹೆಚ್ಚು ಪ್ರಚಲಿತ ಅಪ್ಲಿಕೇಷನ್ ಇದು ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳ ಎಲ್ಲ ಮಾಹಿತಿ ಒಳಗೊಂಡಿರುವುದಲ್ಲದೆ, ಅವರ ಸಿಲೇಬಸ್ ಹಾಗೂ ಹಾಜರಾತಿ ಮತ್ತು ಟೈಮ್ ಟೇಬಲ್‌ಗಳನ್ನು ವಿದ್ಯಾರ್ಥಿಗಳಿಗೆ ವರ್ಗಾಯಿಸುವುದಲ್ಲದೇ

ಅವರ ಫೋನಿಗೆ ಮಾಹಿತಿ ನೀಡುವುದಲ್ಲದೆ, ವಿದ್ಯಾರ್ಥಿಗಳಿಗೆ ಆಕರ್ಷಕ ವಿನ್ಯಾಸದಲ್ಲಿ ವೇಳಾಪಟ್ಟಿ ಹಾಗೂ ವರ್ಗ ವೇಳಾಪಟ್ಟಿಯನ್ನು ಒಳಗೊಂಡಿರುತ್ತದೆ.

೯. ಮ್ಯಾಥ್ವೇ: ಗಣಿತ ವಿಷಯ ಅಭ್ಯಸಿಸುವ ವಿದ್ಯಾರ್ಥಿಗಳಿಗೆ ಅವರ ಗಣಿತ ಮನೆಗೆಲಸ ಕಡಿಮೆಗೊಳಿಸುವುದರೊಂದಿಗೆ ಎಂತಹ ಕ್ಲಿಷ್ಟಕರವಾದ ಸಮಸ್ಯೆಗಳನ್ನು ಪರಿಹರಿಸಲು ಇದು ವಿದ್ಯಾರ್ಥಿಗಳಿಗಾಗಿಯೇ ವಿನ್ಯಾಸಗೊಳಿಸಲಾಗಿದೆ. ಇದರಿಂದ ಗಣಿತಕ್ಕೆ ಸಂಬಂಧಿಸಿದ ಎಲ್ಲ ತರಹದ ಕಾರ್ಯಗಳನ್ನು ಸುರಳಿತವಾಗಿ ಬಗೆಹರಿಸಿಕೊಳ್ಳಲು ತಮಗೆ ಪೂರ್ಣ ಪ್ರಮಾಣದ ಅಧಿಕಾರ ನೀಡುವುದರೊಂದಿಗೆ ಅನೇಕ ಬೀಜಗಣಿತದಿಂದ ಕ್ಯಾಲ್ಕುಲಸ್ ಮತ್ತು ಇತರೆ ಹಲವಾರು ಗಣಿತ ಕಾರ್ಯಗಳಿಗೆ ಇದರಲ್ಲಿ ಆಯ್ಕೆಗಳನ್ನು ಇಡಲಾಗಿದೆ. ಇದರಲ್ಲಿರುವ ಕಾರ್ಯಗಳೊಂದಿಗೆ ನಿಮ್ಮದೆ ಪ್ರಶ್ನೆಗಳನ್ನು ಹುಟ್ಟು ಹಾಕಿ ಅದಕ್ಕೆ ಉತ್ತರವನ್ನು ಹುಡುಕಿಕೊಳ್ಳಬಹುದು. ಇದೊಂದು ಸಾಮಾನ್ಯ ವಿದ್ಯಾರ್ಥಿಗಳಿಂದ ಹಿಡಿದು ಗಣಿತ ಪರಿಣಿತ ಪಡೆದವರವರೆಗೂ ಇದು ಬಳಸುವುದರಿಂದ ಉತ್ತಮ ಫಲಿತಾಂಶ ನೀಡುತ್ತದೆ.

೧೦. ಇಂಗ್ಲೀಷ ಕನ್ನಡ ಡಿಕ್ಷನರಿ: ಇದು ಒಂದು ಕನ್ನಡ–ಇಂಗ್ಲೀಷ ಮತ್ತು ಇಂಗ್ಲೀಷ–ಕನ್ನಡ ಡಿಕ್ಷನರಿ ಈ ಹೊಸ ನಿಘಂಟು ಕೇವಲ ಪದ ಹುಡುಕುವುದಲ್ಲದೆ ಉಚ್ಚಾರಣೆ ಕೇಳಲು ಮತ್ತು .ಉಚ್ಚಾರಣೆಯಿದ ಪದಗಳನ್ನು ಹುಡುಕಬಹುದು. ಇದರಲ್ಲಿ ಎಲ್ಲ ಪದಗಳಿಗೂ ಸ್ಪಷ್ಟವಾದ ಅರ್ಥ ನೀಡುವುದಲ್ಲದೆ ಹೊಸ ಪದಗಳನ್ನು ಅದರಲ್ಲಿ ಸೇರಿಸಬಹುದು. ವಿದ್ಯಾರ್ಥಿಗಳಾವರು ಈ ಅಪ್ಲಿಕೇಷನ್‌ದಿಂದ ತಮ್ಮ ಬರೆಹದ, ಆಲಿಸುವ, ಓದುವ ಮತ್ತು ಉಚ್ಚಾರಣೆಯ ಕೌಶಲ್ಯಗಳನ್ನು ಹೆಚ್ಚಿಸುವುದಲ್ಲದೆ. ತರಬೇತಿಯನ್ನು ನೀಡುತ್ತದೆ ಹೀಗೆ ವಿವಿಧ ಆಯಾಮುಗಳನ್ನು ಒಳಗೊಂಡಿರುವುದರಿಂದ ಈ ಒಂದು ಅಪ್ಲಿಕೇಷನ್ ಕಲಿಕೆಯ ಪ್ರಾರಂಭದಿಂದ ಎಲ್ಲಾ ವೇಳೆಯಲ್ಲಿ ಅನಿವಾರ್ಯವಾಗಿದೆ.

೧೧.ಗ್ರಂಥ ಸೂಚಿ ಸಹಾಯಕ ಅಪ್ಲಿಕೇಷನ್‌ಗಳು (Bibliography Helper Apps): ಇಂದಿನ ಸಂಶೋಧನಾ ವಿದ್ಯಾರ್ಥಿಗಳು ಅನೇಕ ಗ್ರಂಥಸೂಚಿ ಸಹಾಯಕ ಅಪ್ಲಿಕೇಷನ್‌ಗಳನ್ನು ಉಪಯೋಗಿಸುತ್ತಾರೆ. ಈ ಒಂದು ಅಪ್ಲಿಕೇಷನ್ ಸಂಶೋಧನಾ ಪ್ರಕ್ರಿಯೆಯಲ್ಲಿ ಬಳಸಲಾದ ಅಥವಾ ಉಲ್ಲೇಖಿಸಲಾದ ಮೂಲಗಳ ಗ್ರಂಥಸೂಚಿ. ಈ ಒಂದು ಅಪ್ಲಿಕೇಷನ್ ಒಳಗೊಂಡಿದೆ. ನೀವು ಗ್ರಂಥ ಸೂಚಿ ತಯಾರಿಸಲು ಬಹಳಷ್ಟು ಗಂಟೆಗಳ ಕಾಲ ಕಳೆಯುವ ಪ್ರಮೇಯ ಇರುವುದಿಲ್ಲಾ. ನೀವು ಕೇವಲ ಮಾಹಿತಿಯನ್ನು ಸರಿಯಾದ ಸ್ವರೂಪದಲ್ಲಿ ಅದರಲ್ಲಿ ಸೇರಿಸಿದಾಗ ನಿಮಗೆ ಅನುಕೂಲವಾಗುವ ಶೈಲಿಯಲ್ಲಿ ಪರಿವರ್ತನೆಗೊಳ್ಳುತ್ತದೆ. ಕಾರಣ ಅಧ್ಯಯನ ಮಾಡುವ ಸ್ಥಳವನ್ನು ಅವಲಂಬಿಸಿ ಗ್ರಂಥ ಸೂಚಿ ಬದಲಾಗುವುದರಿಂದ ಅದಕ್ಕೆ ತಕ್ಕಂತೆ ಉದಾಹರಣೆಗೆ ಎಂ.ಎಲ್.ಎ., ಎ.ಪಿ.ಎ ಮತ್ತು ಚಿಕ್ಯಾಗೊ ಶೈಲಿಗಳಲ್ಲಿ ಉಲ್ಲೇಖವನ್ನು ತಯಾರಿಸಬಹುದು. ಇವುಗಳು ಈಸಿಬಿಬ್, ಸೈಟೆಡ್ ಮುಂತಾದ ಅಪ್ಲಿಕೇಷನ್‌ಗಳ ಮೂಲಕ ಮಾಹಿತಿ ಸೇರಿಸಿ ಇಲ್ಲವೆ ಪುಸ್ತಕದ ಬಾರ್‌ಕೋಡ್ ಚಿತ್ರವನ್ನು ಸ್ಕ್ಯಾನ್ ಮಾಡುವ ಮೂಲಕ ವೃತ್ತಿಪರ ಉಲ್ಲೇಖವನ್ನೊಳಗೊಂಡ ಗ್ರಂಥಸೂಚಿಯನ್ನು ತಯಾರಿಸಬಹುದು.

೧೨. ವೀಡಿಯೊ ಕರೆ ಅಪ್ಲಿಕೇಷನ್‌ಗಳು (Video Call Apps): ಹೆಚ್ಚು ವಿದ್ಯಾರ್ಥಿಗಳು ಈಗ ಸ್ಕೈಪ್ ಮತ್ತು ಫೇಸ್ ಟೈಮ್ ನಂತಹ ಅನೇಕ ವೀಡಿಯೊ ಕರೆ ಮಾಡುವ ಸಾಫ್ಟವೇರ್ ಬಗ್ಗೆ ತಿಳಿದಿರುತ್ತಾರೆ. ಆದರೆ ಕಂಪ್ಯೂಟರ್ ಕಂಪನಿಗಳು ತಮ್ಮ ಉತ್ಪನಗಳಲ್ಲಿ ಹೆಚ್ಚು ಗುಣಮಟ್ಟದ ಕ್ಯಾಮೆರಾಗಳನ್ನು ಸಂಯೋಜಿಸುವುದರಿಂದ ಮತ್ತು ಇಂಟರ್ನೆಟ್ ಸಂಪರ್ಕದ ವೇಗವು ಹೆಚ್ಚಿರುವುದರಿಂದ ಈ ತಂತ್ರಜ್ಞಾನವು ಇನ್ನಷ್ಟು ಸುಲಭವಾಗಿ ಪ್ರವೇಶವಾಗುತ್ತಿದೆ. ಒಟ್ಟಾರೆ ತಂತ್ರಜ್ಞಾನ ಸುಧಾರಿಸಿದಂತೆ ಸಣ್ಣ ಸಣ್ಣ ಸಾಧನಗಳ ಮೂಲಕ ಜಗತ್ತಿನ ಯಾವುದೇ ಮೂಲೆಯಲ್ಲಿ ಕೆಲಸದಲ್ಲಿ ನಿರತರಾಗಿದ್ದಾಗ ಪಾಲಕರೊಂದಿಗೆ ಸಂಪರ್ಕ ಹೊಂದಲು ಹಾಗೂ ನೇರವಾಗಿ ಪಠ್ಯವನ್ನು ಬ್ರೌಸ್ ಮಾಡಲು ಮತ್ತು ಇದನ್ನು ಉಪಯೋಗಿಸಲು ಅನುಕೂಲವಾಗಿದೆ. ಇವುಗಳಲ್ಲಿ ಇಮೋ ಮತ್ತು ಟ್ಯಾಂಗೋ ಮುಂತಾದ ಅಪ್ಲಿಕೇಷನಗಳು ಕಾರ್ಯನಿರ್ವಹಿಸುತ್ತವೆ.

೧೩. ವಿದ್ಯಾರ್ಥಿಗಳ ಸುರಕ್ಷತಾ ಅಪ್ಲಿಕೇಷನ್‌ಗಳು: ಈ ಅಪ್ಲಿಕೇಷನ್‌ಗಳನ್ನು ವಾಸ್ತವವಾಗಿ ಕ್ಯಾಂಪಸ್ ಒಳಗೆ ಮತ್ತು ಹೊರಗೆ ವಿದ್ಯಾರ್ಥಿಗಳ ವೈಯಕ್ತಿಕ ಸುರಕ್ಷತೆಯ ಮೇಲೆ ಕೇಂದ್ರಿಕರಿಸಲು ವಿನ್ಯಾಸಗೊಳಿಸಲಾಗಿದೆ. ತುರ್ತು ಸಮಯದಲ್ಲಿ ವಿದ್ಯಾರ್ಥಿಗಳ ಪಾಲಕರು ಅಥವಾ ಸ್ನೇಹಿತರೊಂದಿಗೆ ಆಪ್ತರೊಂದಿಗೆ ಸಂಪರ್ಕದಲ್ಲಿರಲು ಬಹಳಷ್ಟು ಉಪಯೋಗ, ಅಪಾಯಕಾರಿ ಸಮಯದಲ್ಲಿ ಸಹಾಯ ಮಾಡುತ್ತದೆ ನೀವು ಅಸುರಕ್ಷಿತ ಅಥವಾ ಬೆದರಿಕೆ ಪರಿಸ್ಥಿತಿಯಲ್ಲಿ ನೀವು ಈ ಜಿ.ಪಿ.ಎಸ್. ಸೆನ್ಸಿಂಗ್ ಅಪ್ಲಿಕೇಷನ್ ಅನ್ನು ಬಳಸಿದರೆ, ಅದು ಸ್ಥಳ ವಿವರಗಳೊಂದಿಗೆ ನಿಮ್ಮ ವಲಯಕ್ಕೆ ಪೂರ್ವ ನಿರ್ಧರಿತ ಎಸ್.ಎಂ.ಎಸ್. ಎಚ್ಚರಿಕೆಯನ್ನು ಸ್ವಯಂ ಚಾಲಿತವಾಗಿ ಕಳಿಸುವುದಲ್ಲದೆ. ತುರ್ತು ಸಹಾಯಕ್ಕಾಗಿ ಹಾಟ್‌ಲೈನಗಳಿಗೆ ಸಂಪರ್ಕ ಸಾಧಿಸಲು ಸಹ ಇದು ಸಹಾಯ ಮಾಡುತ್ತದೆ. ಇವುಗಳಲ್ಲಿ ಸರ್ಕಲ್ ಆಫ್ ಸಿಕ್ಸ್, ಬಿ–ಸೇಫ್, ರಿಯಾಕ್ಟ್ ಮೊಬೈಲ್ ಮುಂತಾದ ಅಪ್ಲಿಕೇಷನ್ ವಿದ್ಯಾರ್ಥಿಗಳಿಗೆ ಆಪ್ತರೊಂದಿಗೆ ಸಂಪರ್ಕದಲ್ಲಿರಲು ಇವುಗಳನ್ನು ವಿನ್ಯಾಸಗೊಳಿಸಲಾಗಿದೆ.

### ತೀರ್ಮಾನ

ಹೀಗೆ ಇತರೆ ಅನೇಕ ಅಪ್ಲಿಕೇಷನ್‌ಗಳು ಇಂದಿನ ವಿಷಮ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳ ಸಹಾಯಕ್ಕೆ ಮಾರ್ಗದರ್ಶನ ನೀಡುತ್ತವೆ. ಕಾಲೇಜು ವಿದ್ಯಾರ್ಥಿಗಳಿಗೆ ಅತ್ಯುತ್ತಮ ಐ.ಓ.ಎಸ್ ಮತ್ತು ಆಂಡ್ರಾಯ್ಡ್ ಅಪ್ಲಿಕೇಷನ್‌ಗಳಿರುವ ತಮ್ಮ ಮೊಬೈಲ್ ಸಾಧನದಲ್ಲಿ ಈ ಅಪ್ಲಿಕೇಷನಗಳನ್ನು ಬಳಸಿಕೊಂಡು ತಮ್ಮ ಜೀವನವನ್ನು ಉತ್ತಮ ಮತ್ತು ಸುಲಭಗೊಳಿಸಬಹುದು. ಇವು ಎಲ್ಲವೂ ಅವುಗಳ ಕಾರ್ಯನಿರ್ವಹಿಸುವ ಉದ್ದೇಶವನ್ನು ಅವಲಂಬಿಸಿ ಅವುಗಳನ್ನು ಉಪಯೋಗಿಸಬಹುದು. ಇನ್ನು ಕಾಲೇಜು ವಿದ್ಯಾರ್ಥಿಗಳಿಗೆ ಆನ್‌ಲೈನ್‌ನಲ್ಲಿ ಅನೇಕ ಇತರೆ ಸೂಕ್ತ ಅಪ್ಲಿಕೇಷನ್‌ಗಳು ಸಹಾ ದೊರೆಯುತ್ತವೆ. ಅವು ಎಲ್ಲವು ವಿದ್ಯಾರ್ಥಿಗಳ ಕಾರ್ಯವನ್ನು ಬಹಳಷ್ಟು ಉನ್ನತಿಯ ಹಾದಿಯಲ್ಲಿ ಕರೆದುಕೊಂಡು ಹೋಗುವಂತವುಗಳಾಗಿವೆ. ಇವುಗಳಿಂದ ಅನೇಕ ಇ–ಪುಸ್ತಕಗಳನ್ನು, ವಿವಿಧ ಆನ್‌ಲೈನ್ ಕೋರ್ಸ್‌ಗಳಿಗಾಗಿ ಹಾಗೂ ಸ್ಪರ್ಧಾತ್ಮಕ ಪರೀಕ್ಷಾ ಮಾರ್ಗದರ್ಶನ, ಹೊಸ ಹೊಸ ಸಾಕಷ್ಟು ಪರಿಣಿತ ಅಪ್ಲಿಕೇಷನ್‌ಗಳು ವಿದ್ಯಾರ್ಥಿಗಳಿಗೆ ಲಭ್ಯವಿರುವುದರಿಂದ ಇಂದು ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ಆನ್‌ಲೈನ್‌ಗೆ ಮೊರೆ ಹೊಗುತ್ತಿರುವುದು ಕಂಡು ಬರುತ್ತದೆ ಮತ್ತು ಇದರ ಬಳಕೆಯು ಸಹ ಸರಳೀಕೃತವಾಗಿದೆ.

Co-ordinator
IQAC
JSS STC Art's and Commerce College.
BANHATTI -587311. Dist. Bagalkote.

PRINCIPAL
STC Arts & Commerce College
BANHATTI (Dist: Bagalkot)

S.T.C. Arts and Commerce College BANHATTI 587 311